# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ–2707/2012/ಎಆರ್‌ಇ–5**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 18/08/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ.ಚಂದ್ರಶೇಖರ್, ಮುಖ್ಯಾಧಿಕಾರಿ, ಪುರಸಭೆ, ದೇವದುರ್ಗ , ರಾಯಚೂರು ಜಿಲ್ಲೆ, (2) ಶ್ರೀ ಶರಣಪ್ಪ, ಕಿರಿಯ ಅಭಿಯಂತರರು, ಪುರಸಭೆ, ದೇವದುರ್ಗ, ರಾಯಚೂರು ಜಿಲ್ಲೆ ಮತ್ತು 3) ಶ್ರೀ.ರಾಜಶೇಖರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪುರಸಭೆ, ದೇವದುರ್ಗ , ರಾಯಚೂರು ಜಿಲ್ಲೆ, ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ವರ್ತನೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

ಶ್ರೀ ರಂಗಣ್ಣ ಪಾಟೀಲ್ ಅಳ್ಳುಂದಿ, ಬಿನ್ ಭೀಮಪ್ಪ , ಮನೆ ನಂ.1–2–63, 'ರವಿ ನಿಲಯ' ಪಾಟೀಲ್ ಓಣಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) (1) ಶ್ರೀ.ಚಂದ್ರಶೇಖರ್, ಮುಖ್ಯಾಧಿಕಾರಿ, ಪುರಸಭೆ, ದೇವದುರ್ಗ , ರಾಯಚೂರು ಜಿಲ್ಲೆ, (2) ಶ್ರೀ ಶರಣಪ್ಪ, ಕಿರಿಯ ಅಭಿಯಂತರರು, ಪುರಸಭೆ, ದೇವದುರ್ಗ, ರಾಯಚೂರು ಜಿಲ್ಲೆ ಮತ್ತು 3) ಶ್ರೀ.ರಾಜಶೇಖರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪುರಸಭೆ, ದೇವದುರ್ಗ, ರಾಯಚೂರು ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 'ಎದುರುದಾರರುಗಳು–1ರಿಂದ 3' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದುರ್ನಡತೆಯನ್ನು ಆರೋಪಿಸಿ, ದೂರನ್ನು ಸಲ್ಲಿಸಿ ಇವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲು ಕೋರಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ**:– ದೇವದುರ್ಗ ಪಟ್ಟಣದ ನೀರು ಸರಬರಾಜು ಯೋಜನೆಯ ಹೂವಿನಡಗಿ ಜಾಕವೇಲಿನಿಂದ ಗುಲ್ಬರ್ಗಾ ಸರ್ಕಲ್ ರವರಗೆ ಸ್ಥಗಿತಗೊಂಡಿರುವ ಕೋಟಿಗಟ್ಟಲೆ ಬೆಲೆ ಬಾಳುವ ಹಳೆಯ ಸಿ.ಐ. ಪೈಪಲೈನ್‌ನ್ನು ಕೇವಲ

ರೂ.10.85/- ಲಕ್ಷಗಳಿಗೆ ಮಾರಾಟ ಮಾಡಿದಂತೆ ತೋರಿಸಿ ಎದುರುದಾರರು ಹಣ ದುರುಪಯೋಗಪಡಿಸಿ ಕೊಂಡಿರುತ್ತಾರೆ.

3) ದೂರುದಾರರ ದೂರಿನ ಮೇಲೆ 1ರಿಂದ 3ನೇ ಎದುರುದಾರರು ಪ್ರತ್ಯೇಕವಾದ ಆಕ್ಷೇಪಣೆಗಳನ್ನು ಸಲ್ಲಿಸಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನೀಡಿದ ಅಂದಾಜುಪಟ್ಟಿಯನ್ನು ಜಿಲ್ಲಾಧಿಕಾರಿಗಳು ಅನುಮೋದಿಸಿದ ನಂತರ ಪುರಸಭೆಯಲ್ಲಿ ಅಂಗೀಕೃತವಾಗಿ, ನಿಯಮದ ಪ್ರಕಾರ ಟೆಂಡರ್‌ಗಳನ್ನು ಕರೆದು ಪೈಪುಗಳನ್ನು ಹರಾಜು ಮಾಡಲಾಗಿದೆ ಮತ್ತು ಹರಾಜು ಮಾಡಿದ ಪೈಪುಗಳನ್ನು ಬಿಡ್‌ದಾರರಿಗೆ ವಿತರಣೆ ಮಾಡಲು ಜಿಲ್ಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆದು ವಿಲೇ ಮಾಡಲಾಗಿದೆ ಎಂದು ಹೇಳಿರುತ್ತಾರೆ.

4. **ದೂರುದಾರರ ದೂರು, ಪ್ರತ್ಯುತ್ತರ, ಎದುರುದಾರರ ಆಕ್ಷೇಪಣೆ ಮತ್ತು ಇತರೆ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ, ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.**

1) ದೇವದುರ್ಗ ಪಟ್ಟಣಕ್ಕೆ 2003ರಲ್ಲಿ ಚಾಲನೆಗೊಳಿಸಿದ ಹೊಸ ನೀರು ಸರಬರಾಜು ಯೋಜನೆ ಕಾರ್ಯನಿರ್ವಹಿಸಿದ ನಂತರ ಈ ಮೊದಲೇ 1996ರಲ್ಲಿ ಅಳವಡಿಸಿದ್ದ ಒಟ್ಟು 6670 ಮೀಟರ್ ಉದ್ದದ 150 ಎಂ.ಎಂ. ವ್ಯಾಸದ ಕೊಳವೆ ಪೈಪ್‌ಲೈನ್ ನಿರುಪಯುಕ್ತವಾಗಿದ್ದು ಮತ್ತು ವಿಲೇವಾರಿ ಮಾಡಲು ಪುರಸಭೆ, ದೇವದುರ್ಗರವರು ದಿನಾಂಕ 09.06.2008ರಂದು ಕಳುವಾದ 570 ಮೀಟರ್ ಪೈಪನ್ನು ಹೊರತುಪಡಿಸಿ, ಉಳಿದ 6100 ಮೀಟರ್ ಪೈಪನ್ನು ಹರಾಜು ಮಾಡಲು ನಿರ್ಣಯ ಕೈಗೊಂಡು, ದಿನಾಂಕ 26.06.2008ರಂದು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿ, ರಾಯಚೂರುರವರಿಗೆ ಕಳುಹಿಸಿರುವುದು ಕಂಡುಬಂದಿರುತ್ತದೆ. ನಂತರ ಜಿಲ್ಲಾಧಿಕಾರಿ, ರಾಯಚೂರುರವರು ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿ, ಬಳ್ಳಾರಿಯವರಿಗೆ ಪತ್ರ ಬರೆದ ಮೇರೆಗೆ, ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿ, ಬಳ್ಳಾರಿಯವರು ದಿನಾಂಕ 04.01.2010ರಂದು ತಮ್ಮ ವರದಿಯ ಜೊತೆಗೆ ಅಂದಾಜುಪಟ್ಟಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿದ್ದು, ಅದನ್ನು ದೇವದುರ್ಗ ಪುರಸಭೆಗೆ ಕಳುಹಿಸಿ, ಮುಂದಿನ ಕ್ರಮ ಕೈಗೊಳ್ಳಲು ಪೂರ್ವಾನುಮತಿ ನೀಡಿ

ತಿಳಿಸಿದ್ದ ಮೇರೆಗೆ ದಿನಾಂಕ 27.08.2010ರಂದು ಪುರಸಭೆಯಲ್ಲಿ ನಿರ್ಣಯ ಕೈಗೊಂಡಿರುತ್ತದೆ. ಆ ನಿರ್ಣಯದಂತೆ ಜಿಲ್ಲಾಧಿಕಾರಿಗಳು ದಿನಾಂಕ 24.10.2010ರಲ್ಲಿ ಪೂರ್ವಾನುಮತಿ ನೀಡಿದ ಮೇರೆಗೆ 1ನೇ ಎದುರುದಾರರು ದಿನಾಂಕ 12.11.2010ರಂದು ಟೆಂಡರ್ ಪ್ರಕಟಣೆ ಹೊರಡಿಸಿದ ಮೇರೆಗೆ ಮೂರು ಸಂಸ್ಥೆಗಳಿಂದ ಟೆಂಡರ್ ತಲುಪಿದ್ದು ಮತ್ತು ಅದರಲ್ಲಿ ಹೆಚ್ಚಿನ ಬಿಡ್‌ದಾರರಾದ ಶ್ರೀ ಮಾರುತಿ ಎಂಟರ್‌ಪ್ರೈಸಸ್-ಲಿಂಗಸಗೂರುರವರ ಟೆಂಡರನ್ನು ಗುರುತಿಸಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆ ಯನ್ನು ದಿನಾಂಕ 17.11.2011ರಂದು ಪಡೆದು, ನಂತರ 1ನೇ ಎದುರುದಾರರು ದಿನಾಂಕ 07.03.2011ರಂದು ಕಾರ್ಯಾದೇಶ ನೀಡಿ, ಪೈಪ್‌ಗಳನ್ನು ಹೆಚ್ಚಿನ ಬಿಡ್‌ದಾರರಿಗೆ ರೂ.10,85,000/- ಗಳಿಗೆ ವಿಲೇ ಮಾಡಿ ಆ ಬಗ್ಗೆ ಹಣ ಪಡೆದುಕೊಂಡಿರುತ್ತಾರೆ.

(2) ಎದುರುದಾರರು ಲಭ್ಯವಿದ್ದ 6100 ಮೀಟರ್ 150 ಎಂ.ಎಂ. ವ್ಯಾಸದ ಕೊಳವೆ ಪೈಪ್‌ಲೈನನ್ನು ವಿಲೇವಾರಿ ಮಾಡಲು ಜಿಲ್ಲಾಧಿಕಾರಿ, ರಾಯಚೂರುರವರ ಮುಖಾಂತರ ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿ, ಬಳ್ಳಾರಿಯವರಿಂದ ಅಂದಾಜುಪಟ್ಟಿಯನ್ನು ಪಡೆದುಕೊಂಡು, ಅದರಂತೆ ಮುಂದಿನ ಕ್ರಮವನ್ನು ಪೈಪ್‌ಗಳ ವಿಲೇವಾರಿ ಬಗ್ಗೆ ತೆಗೆದುಕೊಂಡಿದ್ದೇವೆ ಎಂದು ಪ್ರತಿಪಾದಿಸಿರುತ್ತಾರೆ. ಸದರಿ ಅಂದಾಜುಪಟ್ಟಿಯಲ್ಲಿ 2 ಅಂಶಗಳು ಕಂಡುಬರುತ್ತವೆ. (1) ಕ್ರಮ ಸಂಖ್ಯೆ.ಎ ರಂತೆ ಮೊದಲಿಗೆ ಅಂದಾಜುಪಟ್ಟಿಯನ್ನು ಹಳೆಯ ಕೊಳವೆ ಮಾರ್ಗವನ್ನು ಹೊರತೆಗೆಯಲು ಅಗೆದ ಟ್ರೆಂಚ್‌ಗಳನ್ನು ಮುಚ್ಚಲು ಸ್ವಚ್ಛಗೊಳಿಸಲು ಲೋಡಿಂಗ್ ಮತ್ತು ಅನ್‌ಲೋಡಿಂಗ್, ಸಾರಿಗೆ ವೆಚ್ಚ ಎಲ್ಲಾ ಸೇರಿ ಆ ಕಾಮಗಾರಿಗೆ ರೂ.6,99,666/- ಎಂದು ಅಂದಾಜಿಸಲಾಗಿರುತ್ತದೆ. (2) 6100 ಮೀಟರ್ ಪೈಪ್‌ಲೈನಿನ ದರ ನಿಗಧಿಪಡಿಸುವ ಬಗ್ಗೆ ಎಲ್ಲಾ ಸವಕಳಿ ಸೇರಿಸಿ ನಿವ್ವಳ 156.07 ಮೆಟ್ರಿಕ್ ಟನ್ ಎಂದು ನಿಗಧಿಪಡಿಸಿ, ಅದನ್ನು ಒಂದು ಮೆಟ್ರಿಕ್ ಟನ್‌ಗೆ ಹಾಲಿ ಸ್ಕ್ರ್ಯಾಪ್ ದರ ರೂ.11,000/- ರಂತೆ ಪೈಪ್‌ಲೈನ್‌ನ ಮೊತ್ತ ರೂ.17,16,770/- ಎಂದು ನಿಗಧಿಪಡಿಸಲಾಗಿರುತ್ತದೆ. ಎದುರುದಾರರು ಈ 2 ಪ್ರತ್ಯೇಕ ಅಂಶಗಳನ್ನು ಗಮನಿಸದೇ, ಕೇವಲ ತಪ್ಪು ಮಾಹಿತಿ ನೀಡಿ, ಪುರಸಭೆಯ ನಿರ್ಣಯವನ್ನು

ಪಡೆದು ಮತ್ತು ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು, ದಿನಾಂಕ 12.11.2010ರಂದು ಕೇವಲ ಒಂದೇ ಟೆಂಡರ್‌ನ್ನು ಜಿಲ್ಲಾ ಗೆಜೆಟ್‌ನಲ್ಲಿ ಮತ್ತು ಪತ್ರಿಕೆಯಲ್ಲಿ ಪ್ರಕಟಿಸಿದ್ದು, ಈ ಪ್ರಕ್ರಿಯೆ ಸಂಪೂರ್ಣ ನಿಯಮದ ವಿರುದ್ಧವಾದ ಕ್ರಮವಾಗಿದ್ದು ಮತ್ತು ಕೆ.ಟಿ.ಪಿ.ಪಿ. ನಿಯಮ 1999-2000ರ ಅನುಸಾರ ಕಾನೂನುಬಾಹಿರವಾಗಿರುತ್ತದೆ. ಆ ಟೆಂಡರ್ ಪ್ರಕಟಣೆಯಲ್ಲಿ ಕಾಮಗಾರಿಯ ವಿವರ "ದೇವದುರ್ಗ ಪುರಸಭೆಯ ವ್ಯಾಪ್ತಿಯಲ್ಲಿ ಕೊಳವೆ ಮಾರ್ಗದ ಬೀಡಿನ ಪೈಪ್‌ಲೈನ್ ಯಥಾಸ್ಥಿತಿಯಲ್ಲಿ ತೆಗೆದುಕೊಂಡು ಹೋಗುವ ಬಗ್ಗೆ ಮತ್ತು ಅದನ್ನು ಟಿನ್ ಹೊಂದಿರುವ ಸ್ಕ್ರ್ಯಾಪ್ ಡೀಲರ್‌ಗಳಿಂದ ಕರೆಯಲಾಗಿರುತ್ತದೆ. ಆದರೆ, ಆ ಟೆಂಡರ್‌ನಲ್ಲಿ ಪೈಪ್‌ಲೈನನ್ನು ಹೊರತೆಗೆದು ಸ್ವಚ್ಛಗೊಳಿಸಿ ಟ್ರೆಂಚ್‌ಗಳನ್ನು ಮುಚ್ಚುವ ಕಾಮಗಾರಿಯಲ್ಲಿ ಮತ್ತು ಪೈಪ್‌ಲೈನನ್ನು ಹಾಲಿ ದರದಂತೆ ಸ್ಕ್ರ್ಯಾಪ್ ಎಂದು ಮಾರಾಟ ಮಾಡುವ ಬಗ್ಗೆ ನಿಗಧಿಪಡಿಸಿ, ಬೇರೆ ಬೇರೆ ಟೆಂಡರ್‌ಗಳನ್ನು ನೀಡಿರುವುದಿಲ್ಲ. ಅದೂ ಅಲ್ಲದೇ, ಟೆಂಡರ್‌ನಲ್ಲಿ ಕಾಮಗಾರಿಯ ಹೆಸರನ್ನು ನಮೂದಿಸಿದ್ದು, ಸ್ಪಷ್ಟವಾಗಿ ಕಾಮಗಾರಿಯ ಬಗ್ಗೆ ಪೈಪ್‌ಲೈನ್ ವಿಲೇವಾರಿ ಮಾಡಿದ ಬಗ್ಗೆ ಪೂರ್ತಿ ವಿವರಣೆ ಇರುವುದಿಲ್ಲ ಮತ್ತು ಅದು ಪಡೆದುಕೊಂಡ ಅಂದಾಜುಪಟ್ಟಿ ಮತ್ತು ಜಿಲ್ಲಾಧಿಕಾರಿಗಳ ಅನುಮೋದನೆಗೆ ಅನುಗುಣವಾಗಿಲ್ಲದಿರವುದು ಕಂಡುಬರುತ್ತದೆ. ಆ ರೀತಿ ಟೆಂಡರ್ ಕರೆಯುವಾಗ್ಗೆ ಎದುರುದಾರರು ಅಂದಾಜು ಪಟ್ಟಿಯ ಕಾಮಗಾರಿಯ ವಿವರಣೆಯನ್ನು ಪೂರ್ಣವಾಗಿ ಪರಿಶೀಲನೆ ಮಾಡಿಲ್ಲ. ಟೆಂಡರ್ ಪ್ರಕಾರ ಪೈಪ್‌ಲೈನನ್ನು ಯಥಾವತ್ತಾಗಿ ಸ್ಥಳದಲ್ಲೇ ತೆಗೆದುಕೊಂಡು ಹೋಗಲು ಬಿಡ್‌ದಾರರಿಂದ ಟೆಂಡರ್ ಕರೆದಿದ್ದು ಮತ್ತು ಎದುರುದಾರರ ಪ್ರಕಾರ ಅದೇ ರೀತಿ ಹೆಚ್ಚಿನ ಬಿಡ್‌ದಾರರು ಪೈಪ್‌ಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ಕಂಡುಬರುತ್ತದೆ. ಆದರೆ, ಆ ರೀತಿ ಆಗಿದ್ದಲ್ಲಿ ಅಂದಾಜುಪಟ್ಟಿಯಲ್ಲಿ ಸೇರಿಸಿದ ಸಾಗಾಣಿಕೆ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮತ್ತು ಇತರ ವೆಚ್ಚಗಳು ಅನಾವಶ್ಯಕವಾಗಿದ್ದು ಮತ್ತು ಆ ವೆಚ್ಚದ ಬಗ್ಗೆ ಎದುರುದಾರರು ಗಮನಿಸಿ, ಪೈಪ್‌ಲೈನ್‌ನ ಅಂದಾಜು ಬೆಲೆಯನ್ನು ಗಮನಿಸಿ, ಇನ್ನೂ ಹೆಚ್ಚಿನ ಮೊತ್ತಕ್ಕೆ ಟೆಂಡರ್ ಕರೆಯಬಹುದಾಗಿತ್ತು. ಇವೆಲ್ಲದರ ಬಗ್ಗೆ

ತಪ್ಪು ಮಾಹಿತಿ ನೀಡಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಪೈಪ್‌ಲೈನ್‌ಗಳನ್ನು ಹರಾಜು ಮೂಲಕ ವಿತರಣೆ ಮಾಡಿದ್ದಾರೆ ಎಂಬ ಎದುರುದಾರರ ಹೇಳಿಕೆಯು ಕ್ರಮಬದ್ಧವಾಗಿರುವುದಿಲ್ಲ ಹಾಗೂ ಕರ್ತವ್ಯಲೋಪವಾಗಿರುತ್ತದೆ. ಅದಲ್ಲದೇ, ಜಿಲ್ಲಾಧಿಕಾರಿಯವರ ಅನುಮೋದನೆ ಆಜ್ಞೆ ದಿನಾಂಕ 17.02.2011ನ್ನು ಗಮನಿಸಿದಾಗ ಕಾಮಗಾರಿಯ ವಿವರಣೆಯಲ್ಲಿ ಕೇವಲ ಪೈಪುಗಳನ್ನು ಸಧ್ಯದ ಸ್ಥಿತಿಯಿಂದ ಅಗೆದು ತೆಗೆದು, ಸ್ವಚ್ಛಗೊಳಿಸಿ ಟ್ರೆಂಚನ್ನು ಮುಚ್ಚಿ, ಅವುಗಳನ್ನು ಸ್ಟಾಕ್‌ಯಾರ್ಡ್‌ಗೆ ಸಾಗಾಣಿಕೆ ಮಾಡುವುದರ ಬಗ್ಗೆ ನಡೆದ ಟೆಂಡರ್ ಪ್ರಕ್ರಿಯೆಯನ್ನು ಮಾರುತಿ ಎಂಟರ್‌ಪ್ರೈಸಸ್‌ರವರ ಪರವಾಗಿ ಒಪ್ಪಿಕೊಂಡಿದ್ದು ಕಂಡುಬರುತ್ತದೆ. ಆದರೆ, ಎದುರುದಾರರು ದಿನಾಂಕ 07.03.2011ರಂದು ಕಾರ್ಯಾದೇಶ ನೀಡಿ, ಪೈಪ್‌ಲೈನನ್ನು ಅಗೆದು ತೆಗೆದು, ತೆಗೆದುಕೊಂಡು ಹೋಗಲು ಹೆಚ್ಚಿನ ಬಿಡ್‌ದಾರರು ಎಂದು ಶ್ರೀ ಮಾರುತಿ ಎಂಟರ್‌ಪ್ರೈಸಸ್-ಲಿಂಗಸಗೂರುರವರಿಗೆ ಆದೇಶ ನೀಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಎದುರುದಾರರು ಅಂದಾಜುಪಟ್ಟಿಯಲ್ಲಿದ್ದ ಅನಾವಶ್ಯಕ ಸಾಗಾಣಿಕೆ, ಲೋಡಿಂಗ್ ಮತ್ತು ಅನ್‌ಲೋಡಿಂಗ್ ವೆಚ್ಚವನ್ನು ಮತ್ತು ಪೈಪ್‌ಲೈನಿನ ಹಾಲಿ ಸ್ಕ್ರ್ಯಾಪ್ ದರವನ್ನು ಗಮನಕ್ಕೆ ತೆಗೆದುಕೊಳ್ಳದೇ, ಒಂದು ಅಸ್ಪಷ್ಟವಾದ ಟೆಂಡರ್ ನೀಡಿ ಮತ್ತು ಕೆಲವೇ ವ್ಯಕ್ತಿಗಳಿಂದ ಟೆಂಡರ್ ಅರ್ಜಿಯನ್ನು ಪಡೆದು, ಕಡಿಮೆ ಬೆಲೆಗೆ ಪೈಪ್‌ಲೈನ್‌ಗಳನ್ನು ಹರಾಜು ಮಾಡಿ ಅಕ್ರಮ ಎಸಗಿ ಅವರ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ.

(3) ಲಭ್ಯವಿದ್ದ ಟೆಂಡರ್ ಸಲ್ಲಿಸಿದ ಬಿಡ್‌ದಾರರ ಪತ್ರಗಳನ್ನು ಗಮನಿಸಿದಾಗ ಮೇಲ್ನೋಟಕ್ಕೆ ದೂರುದಾರರು ಹೇಳಿದಂತೆ ಒಂದೇ ಬರವಣಿಗೆಯಿಂದ ಇದ್ದು, ಒಂದೇ ವ್ಯಕ್ತಿ ಸಲ್ಲಿಸಿದ್ದು ಕಂಡುಬರುತ್ತವೆ. ಅದರಲ್ಲಿ ಬಿಡ್ ಮಾಡಿದ ಸ್ಕ್ರ್ಯಾಪ್ ಡೀಲರ್‌ಗಳು ಅಧಿಕೃತ ಟಿನ್ ನಂಬರ್‌ನ್ನು ಹೊಂದಿದವರೋ ಅಥವಾ ಅಲ್ಲವೋ ಎಂದು ಪರಿಗಣಿಸಲು ಆಗುವುದಿಲ್ಲ.

(4) ಹಾಗೂ, ಈ ಪೈಪ್‌ಲೈನ್ ಅಳವಡಿಸುವಲ್ಲಿ ಉಪಯೋಗಿಸಿದ ಸೀಸ ಅಥವಾ ಐಇಂಆನ ಪ್ರಮಾಣವನ್ನು ಮತ್ತು ಅದರ ಬೆಲೆಯನ್ನು ಗಮನಿಸಿದೇ, ಹರಾಜು ಪ್ರಕ್ರಿಯೆ ನಡೆಸಿದ್ದು ಮತ್ತು ಅಂದಾಜುಪಟ್ಟಿಯಂತೆ ಪೈಪ್‌ಲೈನನ್ನು ಯಥಾವತ್ತಾಗಿ ಮೇಲೆ ತೆಗೆಯಲು ಮತ್ತು ಸ್ವಚ್ಛಗೊಳಿಸಲು ಆಗುವ ವೆಚ್ಚದ ಬಗ್ಗೆ ಅಂದಾಜು ಮಾಡಲಾಗಿ ಮತ್ತು ಅದಲ್ಲದೇ, ಅಂದಾಜುಪಟ್ಟಿಯಲ್ಲಿ (ಎ2)ರಲ್ಲಿ ಪೈಪುಗಳ ಹೊರತೆಗೆಯುವಿಕೆ ಮತ್ತು ಸ್ವಚ್ಛತೆ, ಜಾಯಿಂಟಿಂಗ್ ಮೆಟೀರಿಯಲ್ ಸೇರಿ ರೂ.1,40,910/- ನ್ನು ಅಂದಾಜುಪಟ್ಟಿಯಲ್ಲಿ ಸೇರಿಸಿರುತ್ತಾರೆ. ಒಂದು ವೇಳೆ ಎದುರುದಾರರ ವಾದ ಒಪ್ಪುವುದಾದರೆ ಆ ಹಣವನ್ನು ಸಹ ಆ ಕಾಮಗಾರಿಯ ಬಗ್ಗೆ ಖರ್ಚು ಎಂದು ತೋರಿಸಿ, ಪೈಪಿನ ಬೆಲೆಯಲ್ಲಿ ಕಡಿತ ಮಾಡಿಕೊಂಡಿದ್ದು ಕಂಡುಬರುತ್ತದೆ.

(5) ಮೇಲ್ಕಂಡ ಎಲ್ಲಾ ವಿವರಣೆಯಿಂದ ಎದುರುದಾರರು ದೇವದುರ್ಗ ಪಟ್ಟಣದ ನೀರು ಸರಬರಾಜು ಯೋಜನೆಯ ಹಳೆಯ ಸಿ.ಐ. ಪೈಪುಗಳನ್ನು ಮಾರಾಟ ಮಾಡಿ, ಕರ್ತವ್ಯಲೋಪವೆಸಗಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಆದುದರಿಂದ ಎದುರುದಾರರ ಆಕ್ಷೇಪಣೆಗಳು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ನೀಡಿರುವುದಿಲ್ಲ.

6) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7) ಹೀಗೆ ಎದುರುದಾರರಾದ (1) ಶ್ರೀ.ಚಂದ್ರಶೇಖರ್, ಮುಖ್ಯಾಧಿಕಾರಿ, ಪುರಸಭೆ, ದೇವದುರ್ಗ, ರಾಯಚೂರು ಜಿಲ್ಲೆ, (2) ಶ್ರೀ ಶರಣಪ್ಪ, ಕಿರಿಯ ಅಭಿಯಂತರರು, ಪುರಸಭೆ, ದೇವದುರ್ಗ, ರಾಯಚೂರು ಜಿಲ್ಲೆ ಮತ್ತು 3) ಶ್ರೀ.ರಾಜಶೇಖರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪುರಸಭೆ, ದೇವದುರ್ಗ, ರಾಯಚೂರು ಜಿಲ್ಲೆ, ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ,

ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ಸಿ.ಸಿ.ಎ) ನಿಯಮ 1966 ರ ನಿಯಮ 3(1)( i), (ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

8) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 18/8

(ನ್ಯಾಯಮೂರ್ತಿ ಎನ್.ಆನಂದ್)
**ಉಪಲೋಕಾಯುಕ್ತರು-1,**
**ಕರ್ನಾಟಕ ರಾಜ್ಯ, ಬೆಂಗಳೂರು.**